Recognition to Bukinakere Circle Society (Defunct)

728. Sri M. K. BOMME GOWDA (Krishnarajapet).—

Will the Minister for Development be pleased to state :—

the reasons for not granting recognition and necessary facilities to the Bukinakere Circle Society (Defunct) of which the General Body Meeting has been held and proceedings of the same have been sent to Government ?

Sri B. L. GOWDA (Deputy Minister for Co-operation).—

There is already a Service Co-operative Society for the Bukinakere Panchayat area. This was registered on 5-11-1965. The resolution for revival of the defunct society was passed in the General body meeting of the Bukinakere Circle M. P. C. S. on 9-7-1968 only. As a Service Co-operative Society is already working there, this society which was defunct since 1954-55 could not be recognised for the same purpose in the same area. The pattern of village co-operative credit structure is one Service Co-operative Society per Village Panchayat.

ಶ್ರೀ ಎಂ. ಕೆ. ಬೊಮ್ಮೇಗೌಡ.—1965ರಲ್ಲಿ ಒಂದು ಸೇವಾ ಸಹಕಾರ ಸಂಘ ನೋಂದಾಯಿಸಲಾಗಿದೆ ಎಂದು ಹೇಳಿದ್ದಾರೆ. 1949ರಲ್ಲಿಯೇ ಅಲ್ಲಿ ಒಂದು ರಿಜಿಸ್ಟರ್ ಸಂಘ ಇದ್ದಾಗ್ಗೆ ಹೊಸ ಸಂಘವನ್ನು ಸ್ಥಾಪನೆ ಮಾಡುವುದಕ್ಕೆ ಅಗತ್ಯವಾದ ಕಾರಣವೇನಿತ್ತು ?

†ಶ್ರೀ ಬಿ. ಎಲ್. ಗೌಡ.—ಹಿಂದೆ ಇದ್ದುದು ಸರ್ಕಲ್ ಮಲ್ಟಿಪರ್ಪಸ್ ಕೋಆಪರೇಟಿವ್ ಸೊಸೈಟಿ. ಅದು 25 ಗ್ರಾಮಗಳಿಗೆ ಮಾತ್ರ ಅನ್ವಯಿಸಿತ್ತು, ಅನುಕೂಲವಾಗಿತ್ತು. ಆದರೆ ಈ ಗ್ರಾಮಪಂಚಾಯತಿಗೆ ಎಾನಲಾಗಿಡುವುದಕ್ಕೋಸ್ಕರ ಬೇರೆ ಒಂದು ಹೊಸ ಸಂಘವನ್ನು ಸ್ಥಾಪನೆ ಮಾಡಲಾಯಿತು.

ಶ್ರೀ ಎಂ. ಕೆ. ಬೊಮ್ಮೇಗೌಡ.—ಈ ಸಂಘ 1949ರ ಸಭೆಯಲ್ಲಿ ರಿಜಿಸ್ಟರ್ ಆಗಿದೆ. ಅದೇ ಈಗ ಪಂಚಾಯತಿಯಾಗಿರುವುದರಿಂದ ಅದನ್ನೇ ಎವಾರ್ಡ್ ಮಾಡುವುದಕ್ಕೆ ಏನು ಕಷ್ಟವಾಯಿತು ?

ಶ್ರೀ ಬಿ. ಎಲ್. ಗೌಡ.—ಈ ಮುನಿಸಿಪಾಲಿಟಿಯಿಂದ ಈ ಪಂಚಾಯತಿ ಆಗಿತ್ತು. ಅದರ ಅಧಿಕಾರ ವ್ಯಾಪ್ತಿಯಲ್ಲಿ 25 ಗ್ರಾಮಗಳನ್ನು ಸೇರಿಸಿದ್ದು ಆಗಿದೆ. ಅದು ಒಂದು ಊರಿಗೆ ಸಂಬಂಧಪಟ್ಟದ್ದು ಅಲ್ಲ.

ಶ್ರೀ ಎಂ. ಕೆ. ಬೊಮ್ಮೇಗೌಡ.—ವೆಂಕಟರಮಣಸ್ವಾಮಿ ಸಹಕಾರ ಸಂಘವೆಂದು ಅಲ್ಲಿ ಬೇರೆ ಇದೆ. ಅದನ್ನೂ ಜೀರ್ಣೋದ್ಧಾರ ಮಾಡಿಸಬಹುದಾಗಿತ್ತು. ಅಂದಮೇಲೆ ಹೊಸದಾಗಿ ಇನ್ನೊಂದು ಸಂಸ್ಥೆಯನ್ನು ರಿಜಿಸ್ಟರ್ ಮಾಡಿಸುವುದಕ್ಕೆ ಅಂತಹ ಪ್ರಬಲವಾದ ಕಾರಣಗಳು ಏನಿದ್ದುವು ? ತಮಗೆ ಬೇಕಾದವರಿಗೆ ಸಹಾಯ ಮಾಡುವುದಕ್ಕಾಗಿ ಈ ರೀತಿ ಇದರಲ್ಲಿ ಹಸ್ತಕ್ಷೇಪ ನಡೆಯುತ್ತಿದೆಯಲ್ಲವೇ ?

ಶ್ರೀ ಬಿ. ಎಲ್. ಗೌಡ.—ಇದರಲ್ಲಿ ಏನೂ ಹಸ್ತಕ್ಷೇಪ ನಡೆಯುತ್ತಾ ಇಲ್ಲ. ಅವರು ಹೇಳುವ ಸಂಘ 1947ರಲ್ಲಿ ಪ್ರಾರಂಭವಾಗಿ ನಿಂತಿತು. 1949ರಲ್ಲಿ ಸರ್ಕಲ್ ಮಲ್ಟಿಪರ್ಪಸ್ ಕೋಆಪರೇಟಿವ್ ಸೊಸೈಟಿ ಪ್ರಾರಂಭವಾಗಿ ಕೊನೆಗೆ ಅದು ಲಿಕ್ವಿಡೇಟಾಗಿ ಅದರಲ್ಲರತಕ್ಕ ಎಲ್ಲ ರೂಲ್ಸ್‌ಗಳನ್ನೂ ವಯೊಲೇಟ್ ಮಾಡಿದ್ದರು. ಅದಕ್ಕಾಗಿ ಹೊಸದಾಗಿ ಇನ್ನೊಂದು ಮಾಡಿದ್ದಾರೆ.

1-30 P.M.

ಶ್ರೀ ಕೆ. ಎಚ್. ಪಾಟೀಲ್.—ಒಂದೇ ಕಾರ್ಯಕ್ಷೇತ್ರದಲ್ಲಿ ಎರಡು ಸಹಕಾರ ಸಂಘಗಳನ್ನು ಸ್ಥಾಪನೆ ಮಾಡುವುದಕ್ಕೆ, ರಿಜಿಸ್ಟರ್ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಸರ್ಕಾರದ ಪಾಲಸಿ ಮತ್ತು ನೀತಿ ಇದೆ. ಕೆಲವು ಕಡೆ ಒಂದೇ ಪಂಚಾಯತಿಯ ಸರಹದ್ದಿನಲ್ಲಿ ಎರಡು ಸಹಕಾರ ಸಂಘಗಳು ಇವೆ. ಈ ರೀತಿ ಒಂದೇ ಪಂಚಾಯತಿಯಲ್ಲಿ ಎರಡು ಸಹಕಾರ ಸಂಘಗಳು ಇದ್ದರೆ

ಲಂಚಕೋರತನಕ್ಕೆ ಅವಕಾಶವಾಗುತ್ತದೆಯೆಂದು ತಮ್ಮ ಗಮನಕ್ಕೆ ಬಂದಿದೆಯೇ? ಆದ್ದರಿಂದ ಅಂಥಾದ್ದನ್ನು ಬಂದು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಬಿ. ಎಲ್. ಗೌಡ.—ವಿಶೇಷ ಸಂದರ್ಭದಲ್ಲಿ 150 ಮಂದಿ ಸದಸ್ಯರು ಮತ್ತು 2,500 ರೂಪಾಯಿ ಷೇರು ಬಂಡವಾಳ ಇದ್ದರೆ ತಮಗೂ ಮತ್ತು ಶ್ರೀಮಾನ್ ಬೊಮ್ಮೇಗೌಡರಿಗೂ ಸೊಸೈಟಿಯನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ.

ಶ್ರೀ ಎನ್. ಎ. ಚನ್ನೇಗೌಡ.—ಆ ಸೊಸೈಟಿ ಡೀಫಂಕ್ಟ್ ಆಗುವುದಕ್ಕೆ ರಾಜಕೀಯ ಕಾರಣ ವಲ್ಲವೇ, ಈಗ ಅದನ್ನು ರಿವೈವ್ ಮಾಡದೇ ಇರುವುದಕ್ಕೆ ರಾಜಕೀಯ ಕಾರಣ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಎಲ್. ಗೌಡ.—1955ನೇ ಇಸವಿಯಲ್ಲಿಯೇ ಈ ಸೊಸೈಟಿಯನ್ನು ಲಿಕ್ವಿಡೇಟ್ ಮಾಡಬೇಕು ಎಂದು ರೆಸೊಲ್ಯೂಷನ್ ಮಾಡಿ ಕಳುಹಿಸಿರುವಾಗ ಇದರಲ್ಲಿ ರಾಜಕೀಯ ಏನಿದೆ ಎಂಬುದು ಗೊತ್ತಾಗುವುದಿಲ್ಲ.

ಶ್ರೀ ಜಿ. ರಾಮೇಗೌಡ.—ಈಗಿರತಕ್ಕ ಸೊಸೈಟಿಯ ಎಲೆಕ್ಷನ್ ಮಾಡದೆ ಅದು ಡಿಫಂಕ್ಟ್ ಆಗಿರುವಾಗ ಮತ್ತೊಂದು ಸೊಸೈಟಿಯನ್ನು ರಿಜಿಸ್ಟರ್ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೀರಾ?

ಶ್ರೀ ಬಿ. ಎಲ್. ಗೌಡ.—ಈ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಸದಾಶಿವಪ್ಪ ಪಾಟೀಲ್.—ಕೋಆಪರೇಟೀವ್ ಆಕ್ಟ್ ಪ್ರಕಾರ ಒಂದೇ ಪಂಚಾಯಿತಿಯಲ್ಲಿ ಒಂದೇ ತರಹ ಎರಡು ಸೊಸೈಟಿಗಳನ್ನು ಮಾಡುವುದಕ್ಕೆ ಅವಕಾಶವಿಲ್ಲ. ಹಾಗಾದರೆ ಇಲ್ಲಿ ಎರಡು ಸೊಸೈಟಿಗಳನ್ನು ಮಾಡುವುದಕ್ಕೆ ಕಾರಣವೇನು?

ಶ್ರೀ ಬಿ. ಎಲ್. ಗೌಡ.—ಈ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ, ವಿಶೇಷ ಸಂದರ್ಭದಲ್ಲಿ 150 ಜನ ಸದಸ್ಯರು ಇದ್ದು 2,500 ರೂಪಾಯಿಗಳ ಷೇರು ಬಂಡವಾಳವನ್ನು ಸೇರಿಸಿದರೆ ಅಂಥವರಿಗೆ ಸೊಸೈಟಿ ಸ್ಥಾಪನೆ ಮಾಡಲು ಪರ್ಮಿಷನ್ ಕೊಡುತ್ತೇವೆ.

ಶ್ರೀ ಎಂ. ನಾಗಪ್ಪ.—ಸ್ವಾಮಿ, ಈ ಬೂಕನಕೆರೆ ಸೊಸೈಟಿಯು 1955ನೇ ಇಸವಿಯಲ್ಲಿಯೇ ಡೀಫಂಕ್ಟ್ ಆಗಿದೆ ಎಂದು ಹೇಳಿದ್ದೀರಿ, ಆ ಸೊಸೈಟಿಗೆ ಸರ್ಕಾರದವರು ಹಣವನ್ನು ಸಾಲದ ರೂಪದಲ್ಲಿ ಕೊಟ್ಟಿದ್ದಾರೆ. ಆ ಹಣದ ಗತಿ ಏನಾಗಿದೆ?

ಶ್ರೀ ಬಿ. ಎಲ್. ಗೌಡ.—ಈಗ ನನ್ನಲ್ಲಿರುವ ಮಾಹಿತಿಯ ಪ್ರಕಾರ ಈ ಸೊಸೈಟಿಯನ್ನು ಲಿಕ್ವಿಡೇಟ್ ಮಾಡಬೇಕೆಂದು 1955ನೇ ಇಸವಿಯಲ್ಲಿಯೇ ಒಂದು ರೆಸೊಲ್ಯೂಷನ್ ಮಾಡಿ ಕಳುಹಿಸಿದ್ದಾರೆ.

Loan received by Industries registered in K. G. F.

743. Sri S. R. SHANMUGAM (K.G.F.).—

Will the Minister for Industries, Information and Publicity be pleased to state :—

(*a*) the number of industries (Small and Medium) registered at K.G.F. (with name, proprietor and other details);

(*b*) the industries received loan or grant from the Government or societies for the past five years?

(*c*) the Industries received quota (with details) from the Department for past five years?